◆ ADVT ◆
ಇಲ್ಲಿ ಜಾಹೀರಾತು
98700 06472 · need24.digital

NEED 24 NEWS
हर ख़बर, हर शहर

ನೀಡ್ 24 ನ್ಯೂಸ್

ಪ್ರತಿ ಸುದ್ದಿ, ಪ್ರತಿ ನಗರ

◆ ADVT ◆
ಇಲ್ಲಿ ಜಾಹೀರಾತು
98700 06472 · need24.digital

DIGITAL E-PAPER

PRGI APPLICATION UNDER PROCESS
Application No. T/GJ/2026/0619/2304/1577

GST
GSTIN 24CINPG0564Q1ZT

UDYAM REGISTERED
UDYAM-GJ-14-0003714

◆ DIGITAL NEWS NETWORK ◆
ಭಾರತದ ವಿಶ್ವಾಸಾರ್ಹ ಬಹುಭಾಷಾ ಡಿಜಿಟಲ್ ನ್ಯೂಸ್ ನೆಟ್‌ವರ್ಕ್
11+ Languages | 24×7 Live | e-Paper Daily

ನಮ್ಮ App ಡೌನ್‌ಲೋಡ್ ಮಾಡಿ
Download on the App Store
GET IT ON Google Play

www.need24.digital
info@need24.in
+91 98700 06472
FOLLOW US:

तेज़ | सटीक | निष्पक्ष | जनहित में | सच की आवाज़ | जन-जन की आवाज़ | निडर पत्रकारिता

LOCAL

ಬೀದರದ 'ಅಕ್ಕ ಪಡೆ': ಮಹಿಳೆ ಮತ್ತು ಮಕ್ಕಳ ಸುರಕ್ಷತೆಗೆ ಅರಿವು ಕಾರ್ಯಕ್ರಮ



ಬೀದರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀ ಪ್ರದೀಪ್ ಗುಂಟಿ, ಐ.ಪಿ.ಎಸ್. ಅವರ ನಿರ್ದೇಶನದಂತೆ, ಮಹಿಳೆ, ಮಕ್ಕಳ ಮತ್ತು ವಿದ್ಯಾರ್ಥಿಗಳ ಸುರಕ್ಷತೆಗೆ ವಿಶೇಷ ಮುತುವರ್ಜಿ ವಹಿಸಿ ತಾಲೂಕುಗಳಲ್ಲಿ ನೇಮಕಗೊಳಿಸಲಾದ 'ಅಕ್ಕ ಪಡೆ' ತಂಡವು ಕಾರ್ಯನಿರ್ವಹಿಸಿದೆ. ವಿದ್ಯಾರ್ಥಿಗಳು, ಮಹಿಳೆ ಮತ್ತು ಮಕ್ಕಳ ರಕ್ಷಣೆಗಾಗಿ ರಚಿಸಲಾದ ಈ ವಿಶೇಷ ತಂಡವು ತನ್ನ ಕಾರ್ಯಕ್ಷೇತ್ರದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ.

ಅಕ್ಕ ಪಡೆಯ ಸದಸ್ಯರು ನಾರಾಯಣಪೂರ ಕ್ರಾಸ್‌ನಲ್ಲಿ ಭೇಟಿ ನೀಡಿ, ಅಲ್ಲಿನ ಮಹಿಳೆ ಮತ್ತು ಮಕ್ಕಳಿಗೆ ತಮ್ಮ ಬಗ್ಗೆ ಪರಿಚಯಿಸಿದರು. ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಕಿರುಕುಳ, ಬಾಲ್ಯ ವಿವಾಹ ನಿಷೇಧ ಕಾಯ್ದೆ, ಪೊಕಸೋ (POCSO) ಕಾಯ್ದೆ, ಮಹಿಳಾ ಸುರಕ್ಷತೆ ಮತ್ತು ಸಂಚಾರಿ ಸುರಕ್ಷತಾ ನಿಯಮಗಳ ಬಗ್ಗೆ ವಿವರವಾದ ಅರಿವು ಮೂಡಿಸಲಾಯಿತು. ಜೊತೆಗೆ, ಸಹಾಯವಾಣಿ ಸಂಖ್ಯೆ 1098, 112 ಮತ್ತು ಸೈಬರ್ ಅಪರಾಧ ಸಹಾಯವಾಣಿ 1930 ಬಗ್ಗೆ ಮಾಹಿತಿ ನೀಡಿ, ಮೊಬೈಲ್ ಬಳಕೆಯಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ತಿಳುವಳಿಕೆ ಒದಗಿಸಲಾಯಿತು.

ಮಹಿಳೆ ಮತ್ತು ಮಕ್ಕಳಿಗೆ ಯಾರಾದರೂ ಅಪರಿಚಿತ ವ್ಯಕ್ತಿ ಆಹಾರ ಅಥವಾ ತಿಂಡಿ ನೀಡಿದಲ್ಲಿ, ಆ ಆಮಿಶ್ಯಕ್ಕೆ ಒಳಗಾಗದಂತೆ ಎಚ್ಚರವಿರಿಸಲಾಯಿತು. ಅಕ್ಕ ಪಡೆಯ ಸದಸ್ಯರು ತಾವು ಸದಾ ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ ಇರುವುದಾಗಿ ಹೇಳಿ, ಅವರಿಗೆ ಯಾವುದೇ ಭಯವಿಲ್ಲದೆ ಬದುಕಬಹುದು ಎಂಬ ಸಕಾರಾತ್ಮಕ ಭಾವನೆಯನ್ನು ಮೂಡಿಸಿದರು. 24 ಗಂಟೆಗಳ ಕಾಲ ಸುರಕ್ಷತೆ ಒದಗಿಸುವ ಈ ತಂಡವು ಜಿಲ್ಲೆಯ ಹೆಮ್ಮೆಯಾಗಿದೆ.

ಪೊಲೀಸ್ ವರಿಷ್ಠಾಧಿಕಾರಿಗಳ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಕ್ಕ ಪಡೆಯ ಅಧಿಕಾರಿ ಮತ್ತು ಸಿಬ್ಬಂದಿಗಳ ಕಾರ್ಯಕ್ಕೆ ಶ್ಲಾಘನೆಯನ್ನು ವ್ಯಕ್ತಪಡಿಸಲಾಗಿದೆ. ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ ಪೊಲೀಸ್ ಇಲಾಖೆಯು ತೆಗೆದುಕೊಳ್ಳುತ್ತಿರುವ ಈ ಕ್ರಮಗಳು ಸಮಾಜದಲ್ಲಿ ಉತ್ತಮ ಪ್ರತಿಕ್ರಿಯೆ ಪಡೆಯುತ್ತಿವೆ.

— Basavaraj pujari

LOCAL

ಭಾಲ್ಕಿಯಲ್ಲಿ ಟ್ರ್ಯಾಕ್ಟರ್ ಮತ್ತು ಲಾರಿ ಚಾಲಕರಿಗೆ ರಸ್ತೆ ಸುರಕ್ಷತಾ ಜಾಗೃತಿ ಕಾರ್ಯಕ್ರಮ



ಬೀದರ ಜಿಲ್ಲಾ ಪೊಲೀಸ್ ವರೀಷ್ಠಾಧಿಕಾರಿಗಳಾದ ಶ್ರೀ ಪ್ರದೀಪ್ ಗುಂಟಿ (ಐ.ಪಿ.ಎಸ್) ಅವರ ನಿರ್ದೇಶನದಂತೆ, ಭಾಲ್ಕಿ ಗ್ರಾಮೀಣ ಪೊಲೀಸ್ ಠಾಣೆಯ ಪಿ.ಎಸ್.ಐ ಶ್ರೀ ಪ್ರಭಾಕರ ಪಾಟೀಲ ಅವರು ರಸ್ತೆ ಸುರಕ್ಷತಾ ನಿಯಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ನಡೆಸಿದ್ದಾರೆ. ಈ ಕಾರ್ಯಕ್ರಮದಲ್ಲಿ ಕಬ್ಬಿನ ಕಾರ್ಖಾನೆಗಳಿಗೆ ಕಬ್ಬನ್ನು ಸಾಗಿಸುತ್ತಿರುವ ಟ್ರ್ಯಾಕ್ಟರ್ ಮತ್ತು ಲಾರಿ ಚಾಲಕರನ್ನು ಬರಮಾಡಿಕೊಳ್ಳಲಾಗಿತ್ತು.

ಚಾಲಕರು ಮತ್ತು ವಾಹನ ಮಾಲೀಕರಿಗೆ, ರಾತ್ರಿ ಸಮಯದಲ್ಲಿ ಹಿಂದಿನಿಂದ ಬರುವ ಇತರ ವಾಹನ ಚಾಲಕರಿಗೆ ತಮ್ಮ ವಾಹನವನ್ನು ಸ್ಪಷ್ಟವಾಗಿ ಕಾಣುವಂತೆ ಮಾಡಲು, ತಮ್ಮ ವಾಹನಗಳ ಹಿಂದೆ ರೆಡಿಯಂ ಸ್ಟಿಕ್ಕರ್ ಅಳವಡಿಸುವಂತೆ ತಿಳಿಸಲಾಗಿದೆ. ಇದರ ಜೊತೆಗೆ, ದ್ವಿಚಕ್ರ ವಾಹನ ಚಲಾಯಿಸುವಾಗ ಹೆಲ್ಮೆಟ್ ಧರಿಸುವುದು ಮತ್ತು ಕಾರ್ ಚಲಾಯಿಸುವಾಗ ಸೀಟ್ ಬೆಲ್ಟ್ ಧರಿಸುವುದು ಕಡ್ಡಾಯ ಎಂದು ಸಂಚಾರಿ ನಿಯಮಗಳ ಹಾಗೂ ಕಾನೂನಿನ ಬಗ್ಗೆ ಜಾಗೃತಿ ಮೂಡಿಸಲಾಗಿದೆ.

ಜಿಲ್ಲೆಯಲ್ಲಿ ರಸ್ತೆ ಅಪಘಾತಗಳ ಪ್ರಮಾಣವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಬೀದರ ಜಿಲ್ಲಾ ಪೊಲೀಸರು ಸದಾ ಪ್ರಯತ್ನಿಸುತ್ತಿದ್ದು, ಈ ಪ್ರಯತ್ನವು ಪ್ರಶಂಸನೀಯವಾಗಿದೆ ಎಂದು ಹೇಳಲಾಗಿದೆ. ಜಿಲ್ಲೆಯ ಪ್ರತಿಯೊಬ್ಬ ನಾಗರಿಕರು ಮತ್ತು ವಾಹನ ಚಾಲಕರು ಈ ಸುರಕ್ಷತಾ ನಿಯಮಗಳನ್ನು ಪಾಲಿಸುವಲ್ಲಿ ಪೊಲೀಸ್ ಇಲಾಖೆಗೆ ಸಹಕರಿಸುವಂತೆ ಕೋರಲಾಗಿದೆ.

— Basavaraj pujari

LOCAL

ಬೀದರದ ಭಾಲ್ಕಿಯಲ್ಲಿ ರಸ್ತೆ ಸುರಕ್ಷತಾ ನಿಯಮಗಳ ಬಗ್ಗೆ ಪೊಲೀಸರಿಂದ ಜಾಗೃತಿ ಕಾರ್ಯಕ್ರಮ



ಬೀದರ ಜಿಲ್ಲಾ ಪೊಲೀಸ್ ವರೀಷ್ಠಾಧಿಕಾರಿಗಳಾದ ಶ್ರೀ ಪ್ರದೀಪ್ ಗುಂಟಿ, ಐ.ಪಿ.ಎಸ್. ರವರ ನಿರ್ದೇಶನದಂತೆ, ಭಾಲ್ಕಿ ಗ್ರಾಮೀಣ ಪೊಲೀಸ್ ಠಾಣೆಯ ಪಿ.ಎಸ್.ಐ ಶ್ರೀ ಪ್ರಭಾಕರ ಪಾಟೀಲ ರವರು ರಸ್ತೆ ಸುರಕ್ಷತಾ ನಿಯಮಗಳ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ನಡೆಸಿದ್ದಾರೆ. ಈ ಕಾರ್ಯಕ್ರಮದಲ್ಲಿ ಭಾಲ್ಕಿಯ ಆರ್.ಟಿ.ಓ (ರಸ್ತೆ ಸಾರಿಗೆ ಅಧಿಕಾರಿ) ರವರೊಂದಿಗೆ ಸಹಯೋಗದಿಂದ ಕಬ್ಬಿನ ಕಾರ್ಖಾನೆಗಳಿಗೆ ಕಬ್ಬನ್ನು ಸಾಗಿಸುತ್ತಿರುವ ಟ್ರ್ಯಾಕ್ಟರ್ ಮತ್ತು ಲಾರಿ ಚಾಲಕರೊಂದಿಗೆ ಸಂವಾದ ನಡೆಸಲಾಯಿತು.

ರಾತ್ರಿ ಸಮಯದಲ್ಲಿ ಹಿಂದಿನಿಂದ ಸಂಚರಿಸುವ ವಾಹನಗಳ ಚಾಲಕರಿಗೆ ಕಾಣುವಂತೆ, ತಮ್ಮ ವಾಹನಗಳ ಹಿಂದೆ ರೆಡಿಯಂ ಸ್ಟಿಕ್ಕರ್ ಅಳವಡಿಸುವಂತೆ ಚಾಲಕರಿಗೆ ತಿಳಿಸಲಾಯಿತು. ಹಾಗೆಯೇ, ದ್ವಿಚಕ್ರ ವಾಹನ ಚಾಲಿಸುವಾಗ ಹೆಲ್ಮೆಟ್ ಮತ್ತು ಕಾರ್ ಚಾಲಿಸುವಾಗ ಸೀಟ್ ಬೆಲ್ಟ್ ಧರಿಸುವುದು ಕಡ್ಡಾಯವೆಂದು ಸ್ಪಷ್ಟಪಡಿಸಲಾಯಿತು. ಇದರ ಮೂಲಕ ಸಂಚಾರಿ ನಿಯಮಗಳ ಮತ್ತು ಸಂಚಾರಿ ಕಾನೂನಿನ ಬಗ್ಗೆ ಜಾಗೃತಿ ಮೂಡಿಸಲಾಗಿದೆ.

ಜಿಲ್ಲೆಯಲ್ಲಿ ರಸ್ತೆ ಅಪಘಾತಗಳ ಪ್ರಮಾಣವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಬೀದರ ಜಿಲ್ಲಾ ಪೊಲೀಸರು ಸದಾ ಪ್ರಯತ್ನಿಸುತ್ತಿದ್ದು, ಈ ಪ್ರಯತ್ನವು ಪ್ರಶಂಸನೀಯವಾಗಿದೆ ಎಂದು ಹೇಳಲಾಗಿದೆ. ಜಿಲ್ಲೆಯ ಪ್ರತಿಯೊಬ್ಬ ನಾಗರಿಕರು ಮತ್ತು ವಾಹನ ಚಾಲಕರು ಈ ಸುರಕ್ಷತಾ ನಿಯಮಗಳನ್ನು ಪಾಲಿಸಿ ಪೊಲೀಸ್ ಇಲಾಖೆಗೆ ಸಹಕರಿಸುವಂತೆ ಕೋರಲಾಗಿದೆ.

— Basavaraj pujari

LOCAL

ಬೀದರ ಪೊಲೀಸ್, ವೈದ್ಯರು, ತನಿಖಾಧಿಕಾರಿಗಳು ಕಾನೂನು ತರಬೇತಿ ಕಾರ್ಯಾಗಾರದಲ್ಲಿ ಭಾಗವಹಿಸಿದರು



ಬೀದರ ಜಿಲ್ಲೆಯ ಪೊಲೀಸ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಬ್ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯದ ಸಹಯೋಗದಲ್ಲಿ ವೈದ್ಯರು, ತನಿಖಾಧಿಕಾರಿಗಳು ಮತ್ತು ತನಿಖಾ ಸಹಾಯಕರಿಗೆ ಕಾನೂನು ತರಬೇತಿ ಕಾರ್ಯಾಗಾರ ನಡೆಸಲಾಯಿತು.

ಈ ಕಾರ್ಯಾಗಾರದ ಉದ್ದೇಶ ಅಪರಾಧ ಪ್ರಕರಣಗಳ ತನಿಖೆ ಹಾಗೂ ನ್ಯಾಯಾಂಗ ಪ್ರಕ್ರಿಯೆಯಲ್ಲಿ ವೈಜ್ಞಾನಿಕ ಮತ್ತು ಕಾನೂನುಬದ್ಧ ನಿಖರತೆಯನ್ನು ಹೆಚ್ಚಿಸುವುದು, ಅಪರಾಧಿಗಳಿಗೆ ಶಿಕ್ಷೆಯಾಗುವ ಪ್ರಮಾಣವನ್ನು ವೃದ್ಧಿಸುವುದು ಮತ್ತು ಅಮಾಯಕರಿಗೆ ನ್ಯಾಯ ದೊರಕಿಸುವುದು.

ಕಾರ್ಯಾಗಾರವನ್ನು ಶ್ರೀ ಸೈಯ್ಯದ್ ಬಲೀಗೂರ್ ರೆಹಮಾನ್, ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಅಧ್ಯಕ್ಷರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಬೀದರ ನಡೆಸಿದರು. ವಿಶೇಷ ಉಪನ್ಯಾಸಕರಾಗಿ ಶ್ರೀ ಮಹೇಶ ವೈದ್ಯ, ಸಲಹೆಗಾರರು, ಸಿಐಡಿ, ಬೆಂಗಳೂರು ಭಾಗವಹಿಸಿದರು.

ಬೀದರ ಜಿಲ್ಲೆಯ ವೈದ್ಯರು, ಪೊಲೀಸ್ ತನಿಖಾಧಿಕಾರಿಗಳು ಹಾಗೂ ತನಿಖಾ ಸಹಾಯಕರು ಕಾರ್ಯಾಗಾರದಲ್ಲಿ ಭಾಗವಹಿಸಿದರು. ಪೊಲೀಸ್ ವರೀಷ್ಠಾಧಿಕಾರಿ ಪ್ರದೀಪ್ ಗುಂಟಿ, IPS, ಬೀದರ ಜಿಲ್ಲೆ, ಬೀದರ, ಈ ಕಾರ್ಯಕ್ರಮವನ್ನು ಬೆಂಬಲಿಸಿದರು.

— Basavaraj pujari

LOCAL

ಬೀದರ್ ಸಂಗೀತ ಕಲಾವಿದ ಕೃಷ್ಣ ಮುಖೇಡಕರ್‌ಗೆ 'ಸ್ವರ ವೈಭವ' ಪ್ರಶಸ್ತಿ



ಬೀದರ್ ನಗರದಲ್ಲಿ ಶುಕ್ರವಾರ (ನ. 13) ಸಂಜೆ ಸಂಗೀತ ಕಲಾ ಮಂಡಲವು ತಮ್ಮ ಹೆಮ್ಮೆಯ ಶಾಸ್ತ್ರೀಯ ಕಲಾವಿದ ಕೃಷ್ಣ ಮುಖೇಡಕರ್ ಅವರಿಗೆ 'ಸ್ವರ ವೈಭವ ಸಮ್ಮಾನ' ಪ್ರದಾನ ಮಾಡಿತು. ನಗರ ರಂಗಮಂದಿರದಲ್ಲಿ ಡಾ. ಚನ್ನಬಸವ ಪಟ್ಟದ್ದೇವರು ಶಾಲು ಹೊದಿಸಿ ಫಲಪುಷ್ಪ ಹಾಗೂ ಸ್ಮರಣಿಕೆ ನೀಡಿ ಗೌರವಿಸಿದರು.

ಸಮಾರಂಭದಲ್ಲಿ ರಾಮಕೃಷ್ಣ ವಿವೇಕಾನಂದ ಆಶ್ರಮದ ಪೂಜ್ಯ ಶ್ರೀ ಜ್ಯೋತಿರ್ಮಯಾನಂದ ಶ್ರೀಗಳು ಕೃಷ್ಣ ಮುಖೇಡಕರ್ ಅವರ ಸಂಗೀತ ಪಯಣವನ್ನು ಶ್ಲಾಘಿಸಿದರು. ಅವರು ಐಟಿಸಿ ಸಂಗೀತ ರಿಸರ್ಚ್ ಅಕಾಡೆಮಿಯಲ್ಲಿ ವಿದ್ಯಾರ್ಥಿವೇತನದೊಂದಿಗೆ ಆಯ್ಕೆಯಾಗಿದ್ದು, ಡಾ. ನರಸಿಂಹಲು ವಡವಾಟಿ, ಪದ್ಮಶ್ರೀ ಪಂಡಿತ್ ಉಲ್ಲಾಸ್ ಕಶಾಲ್ಕರ್, ಪದ್ಮವಿಭೂಷಣ ಡಾ. ಗಿರಿಜಾದೇವಿ, ಪಂ. ರಾಮುಲು ಗಾದಗಿ ಅವರಂತಹ ದಿಗ್ಗಜರ ಬಳಿ ತರಬೇತಿ ಪಡೆದಿದ್ದಾರೆ.

ಸನ್ಮಾನ ಸಮಾರಂಭದ ಬಳಿಕ ಕೃಷ್ಣ ಮುಖೇಡಕರ್ ಅವರು ವಿಶೇಷ ಶಾಸ್ತ್ರೀಯ ಸಂಗೀತ ಕಛೇರಿ (ರಸಸಂಜೆ) ನಡೆಸಿದರು. ವಿವಿಧ ರಾಗಗಳಲ್ಲಿ ಬಂದಿಶ್ ಹಾಗೂ ಭಕ್ತಿಗೀತೆಗಳನ್ನು ತಬಲಾ ಮತ್ತು ಹಾರ್ಮೋನಿಯಂ ಜೊತೆ ಪ್ರದರ್ಶಿಸಿ ಪ್ರೇಕ್ಷಕರ ಮನಸೂರೆಗೊಳಿಸಿದರು.

ಆಶ್ರಮದ ಪೂಜ್ಯ ಶ್ರೀ ಜ್ಯೋತಿರ್ಮಯಾನಂದ ಶ್ರೀಗಳು ಕೃಷ್ಣ ಮುಖೇಡಕರ್ ಅವರ ಸಂಗೀತ ಪಯಣವನ್ನು ಶ್ಲಾಘಿಸಿದರು. ಅವರು ಐಟಿಸಿ ಸಂಗೀತ ರಿಸರ್ಚ್ ಅಕಾಡೆಮಿಯಲ್ಲಿ ವಿದ್ಯಾರ್ಥಿವೇತನದೊಂದಿಗೆ ಆಯ್ಕೆಯಾಗಿದ್ದು, ಡಾ. ನರಸಿಂಹಲು ವಡವಾಟಿ, ಪದ್ಮಶ್ರೀ ಪಂಡಿತ್ ಉಲ್ಲಾಸ್ ಕಶಾಲ್ಕರ್, ಪದ್ಮವಿಭೂಷಣ ಡಾ. ಗಿರಿಜಾದೇವಿ, ಪಂ. ರಾಮುಲು ಗಾದಗಿ ಅವರಂತಹ ದಿಗ್ಗಜರ ಬಳಿ ತರಬೇತಿ ಪಡೆದಿದ್ದಾರೆ.

ಸನ್ಮಾನ ಸಮಾರಂಭದ ಬಳಿಕ ಕೃಷ್ಣ ಮುಖೇಡಕರ್ ಅವರು ವಿಶೇಷ ಶಾಸ್ತ್ರೀಯ ಸಂಗೀತ ಕಛೇರಿ (ರಸಸಂಜೆ) ನಡೆಸಿದರು. ವಿವಿಧ ರಾಗಗಳಲ್ಲಿ ಬಂದಿಶ್ ಹಾಗೂ ಭಕ್ತಿಗೀತೆಗಳನ್ನು ತಬಲಾ ಮತ್ತು ಹಾರ್ಮೋನಿಯಂ ಜೊತೆ ಪ್ರದರ್ಶಿಸಿ ಪ್ರೇಕ್ಷಕರ ಮನಸೂರೆಗೊಳಿಸಿದರು.

ಹಿರಿಯ ಪತ್ರಕರ್ತ ಶಿವಶರಣಪ್ಪ ವಾಲಿ, ಪೂಜ್ಯ ಮಾತಾ ಅಮೃತಾನಂದಮಯಿ, ಪಂ. ರಾಮುಲು ಗಾದಗಿ, ರಾಜೇಂದ್ರ ಸಿಂಗ್ ಪವಾರ್, ಡಾ. ಜಗನ್ನಾಥ ಹೆಬ್ಬಾಳೆ ಮುಂತಾದ ಅತಿಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಕೃಷ್ಣ ಮುಖೇಡಕರ್ ಅವರ ಭವಿಷ್ಯ ಉಜ್ವಲವಾಗಿರಲಿ ಎಂದು ಹಾರೈಸಿದರು.

ಸಂಗೀತ ಕಲಾ ಮಂಡಲದ ಅಧ್ಯಕ್ಷ ರಾಜೇಂದ್ರ ಸಿಂಗ್ ಪವಾರ್, ಉಪಾಧ್ಯಕ್ಷ ರಮೇಶ ಗೋಯಲ್, ಕಾರ್ಯದರ್ಶಿ ಎಸ್. ಆರ್. ಸಂಗಮಕರ ಸೇರಿದಂತೆ ಪದಾಧಿಕಾರಿಗಳು ಹಾಗೂ ನೂರಾರು ಸಂಗೀತ ಪ್ರೇಮಿಗಳು ಉಪಸ್ಥಿತರಿದ್ದರು.

— Basavaraj pujari

ಜಾಲಹಳ್ಳಿ ಪ್ರಜಾ ಸೇವಾ ಆಂದೋಲನದಲ್ಲಿ ಆರೋಗ್ಯ ಇಲಾಖೆಯ ಸ್ಟಾಲ್ ಗಮನ ಸೆಳೆದಿದೆ - ನಿಮ್ಮ ಆರೋಗ್ಯ ನಮ್ಮ ಆದ್ಯತೆ ಎಂದ ತಾಲ್ಲೂಕು ವೈದ್ಯಾಧಿಕಾರಿ ಡಾ. ಬನದೇಶ - ಸರ್ಕಾರದ ಆರೋಗ್ಯ ಸೌಲಭ್ಯಗಳನ್ನು ಸದುಪಯೋಗ ಪಡೆದುಕೊಳ್ಳಿ ಎಂದು ಕರೆ



ಜಾಲಹಳ್ಳಿ ಪ್ರಜಾ ಸೇವಾ ಆಂದೋಲನದಲ್ಲಿ ಆರೋಗ್ಯ ಇಲಾಖೆಯ ಸ್ಟಾಲ್ ಗಮನ ಸೆಳೆದಿದೆ

ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿಯಲ್ಲಿ ನಡೆದ ಪ್ರಜಾ ಸೇವಾ ಆಂದೋಲನ ಕಾರ್ಯಕ್ರಮದಲ್ಲಿ ಆರೋಗ್ಯ ಇಲಾಖೆಯಿಂದ ವಿಶೇಷ ಸ್ಟಾಲ್ ಹಾಕಿ ಇಲಾಖೆಯಲ್ಲಿ ದೊರೆಯುವ ಸೌಲಭ್ಯಗಳ ಕುರಿತು ಸಾರ್ವಜನಿಕರಿಗೆ ವಿಸ್ತೃತ ಮಾಹಿತಿ ನೀಡಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ತಾಲ್ಲೂಕು ವೈದ್ಯಾಧಿಕಾರಿ ಡಾ. ಬನದೇಶ ಅವರು, ನಿಮ್ಮ ಆರೋಗ್ಯ ನಮ್ಮ ಆದ್ಯತೆ ಎಂಬ ಘೋಷಣೆಯೊಂದಿಗೆ ಆರೋಗ್ಯ ಇಲಾಖೆ ಜನರ ಬಾಗಿಲಿಗೆ ಬಂದು ಸೇವೆ ನೀಡುತ್ತಿದೆ ಎಂದು ತಿಳಿಸಿದರು.

ಸರ್ಕಾರದ ವಿವಿಧ ಆರೋಗ್ಯ ಯೋಜನೆಗಳು, ಉಚಿತ ತಪಾಸಣೆ, ಮಾತೃ-ಮಕ್ಕಳ ಆರೋಗ್ಯ, ಲಸಿಕೆ, ಕ್ಷಯ, ಮಧುಮೇಹ, ರಕ್ತದೊತ್ತಡ ನಿಯಂತ್ರಣ ಸೇರಿದಂತೆ ಇಲಾಖೆಯಲ್ಲಿ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಸಾರ್ವಜನಿಕರು ಸದುಪಯೋಗ ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಜನರು ಆರೋಗ್ಯದ ಬಗ್ಗೆ ನಿರ್ಲಕ್ಷ್ಯ ಮಾಡಬಾರದು. ಸಣ್ಣ ಸಮಸ್ಯೆಯಿದ್ದರೂ ಕೂಡಲೇ ಹತ್ತಿರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ತಪಾಸಣೆ ಮಾಡಿಸಿಕೊಳ್ಳಬೇಕು. ಆರೋಗ್ಯ ಇಲಾಖೆ ಯಾವಾಗಲೂ ಜನರ ಸೇವೆಗೆ ಸಿದ್ಧವಿದೆ. ಆಶಾ ಕಾರ್ಯಕರ್ತೆಯರು ಹಳ್ಳಿ ಹಳ್ಳಿಗಳಲ್ಲಿ ಜನರಿಗೆ ಆರೋಗ್ಯ ಸೇವೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎಂದು ಡಾ. ಬನದೇಶ ಅವರು ತಿಳಿಸಿದರು.

ಕಾರ್ಯಕ್ರಮಗಳು ಜನರಿಗೆ ಸರ್ಕಾರದ ಸೌಲಭ್ಯಗಳ ಬಗ್ಗೆ ನೇರ ಮಾಹಿತಿ ನೀಡಲು ಉತ್ತಮ ವೇದಿಕೆಯಾಗಿದೆ. ಇಂತಹ ಅವಕಾಶವನ್ನು ಸಾರ್ವಜನಿಕರು ಬಳಸಿಕೊಳ್ಳಬೇಕು ಎಂದು ಅವರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಸಮುದಾಯ ವೈದ್ಯಾಧಿಕಾರಿ ಡಾ. ನಾಗರಾಜ, ಸಿಬ್ಬಂದಿಗಳಾದ ಚಂದ್ರಶೇಖರ, ಚೇತನ ಸೇರಿದಂತೆ ಜಾಲಹಳ್ಳಿ ಹೋಬಳಿಯ ವಿವಿಧ ಹಳ್ಳಿಯ ಆಶಾ ಕಾರ್ಯಕರ್ತರು ಇದ್ದು, ಸ್ಟಾಲ್‌ಗೆ ಬಂದ ಸಾರ್ವಜನಿಕರಿಗೆ ಆರೋಗ್ಯ ಯೋಜನೆಗಳು, ಸೌಲಭ್ಯಗಳು, ತಪಾಸಣೆ ಕುರಿತು ಮಾಹಿತಿ ನೀಡಿದರು.

— Ningappa

ಜಾಲಹಳ್ಳಿ: ಸರ್ಕಾರಿ ಕಿರಿಯ ಉರ್ದು ಶಾಲೆಯಲ್ಲಿ ಮಕ್ಕಳ ದಿನಾಚರಣೆ ಸಂಭ್ರಮ



ಜಾಲಹಳ್ಳಿ ಸರ್ಕಾರಿ ಕಿರಿಯ ಉರ್ದು ಶಾಲೆಯಲ್ಲಿ ಮಕ್ಕಳ ದಿನಾಚರಣೆ ಸಂಭ್ರಮ

ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿಯ ಸರ್ಕಾರಿ ಕಿರಿಯ ಉರ್ದು ಶಾಲೆಯಲ್ಲಿ ಮಕ್ಕಳ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖಂಡರಾದ ಇಮಾಮ್ ಸಾಬ್ ಅವರು ಮಾತನಾಡಿ, ಮಕ್ಕಳೇ ದೇಶದ ಭವಿಷ್ಯ, ಮಕ್ಕಳ ಶಿಕ್ಷಣಕ್ಕೆ ಎಲ್ಲರೂ ಆದ್ಯತೆ ನೀಡಬೇಕು ಎಂದು ಕರೆ ನೀಡಿದರು. ಮಕ್ಕಳು ಶಿಕ್ಷಣದ ಜೊತೆಗೆ ಸಂಸ್ಕಾರ, ಶಿಸ್ತು ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಶಾಲಾ ಮಕ್ಕಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಿ ಸಂಭ್ರಮಿಸಿದರು. ಶಿಕ್ಷಕರು, ಪೋಷಕರು ಹಾಗೂ ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಕ್ಕಳನ್ನು ಪ್ರೋತ್ಸಾಹಿಸಿದರು.

— Ningappa

Video: ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ಬೃಹತ್ ಹೋರಾಟ



ರಾಯಚೂರು: ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಸಿರವಾರ ಕ್ರಾಸ್ ಬಳಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ನೇತೃತ್ವದಲ್ಲಿ ಬೃಹತ್ ಹೋರಾಟ ನಡೆಯಿತು.

ಸಂಘದ ರಾಜ್ಯಾಧ್ಯಕ್ಷ ಕೂಡಿಹಳ್ಳಿ ಚಂದ್ರಶೇಖ ಹೋರಾಟದಲ್ಲಿ ಭಾಗವಹಿಸಿ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದರು. ರೈತರು ಈಗಾಗಲೇ ಬರಗಾಲದಿಂದ ತತ್ತರಿಸಿದ್ದಾರೆ,ಬೆಳೆದ ಬೆಳೆ ಕೈಗೆ ಸೇರುವ ಮುನ್ನ ನೀರು ನಿಲ್ಲಿಸುವ ಸರ್ಕಾರದ ಕ್ರಮ ಖಂಡನೀಯ, ರೈತರ ಜೀವದ ಜೊತೆ ಸರ್ಕಾರದ ಚಲ್ಲಾಟ ಸಲ್ಲದು ಜನವರಿ ಕೊನೆಯವರೆಗೆ ಸಂಪೂರ್ಣ ನೀರು ಹರಿಸಿದರೆ ಮಾತ್ರ ರೈತರ ಬೆಳೆಗಳು ಕೈ ಸೇರುವ ಸಾಧ್ಯತೆ ಇವೆ.ಈಗಿರುವಾ ಏಕಾಏಕಿ ಸರ್ಕಾರದ ನಿರ್ಧಾರ ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೂರಾರು ರೈತರು ಭಾಗವಹಿಸಿ ನೀರಿಗಾಗಿ ನಡೆದ ಬೃಹತ್ ಹೋರಾಟ ಯಶಸ್ವಿಗೊಳಿಸಿದ್ದಾರೆ.

— Ningappa

ಮಟ್ಟದ ಪ್ರಜಾಸೇವಾ ಆಂದೋಲನಕ್ಕೆ ಶಾಸಕಿ ಕರೆಮ್ಮ ಜಿ. ನಾಯಕ ಚಾಲನೆಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸುವ ಉದ್ದೇಶ; ಸಾರ್ವಜನಿಕರ ಅಹವಾಲುಗಳಿಗೆ ತ್ವರಿತವಾಗಿ ಸ್ಪಂದಿಸುವಂತೆ ಅಧಿಕಾರಿಗಳಿಗೆ ಸೂಚನೆ



ಜಾಲಹಳ್ಳಿ ಬ್ರೇಕಿಂಗ್ ನ್ಯೂಸ್

ಜಾಲಹಳ್ಳಿಯಲ್ಲಿ ಹೋಬಳಿ ಮಟ್ಟದ ಪ್ರಜಾಸೇವಾ ಆಂದೋಲನಕ್ಕೆ ಶಾಸಕಿ ಕರೆಮ್ಮ ಜಿ. ನಾಯಕ ಚಾಲನೆ

ಜನರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸುವ ಉದ್ದೇಶ; ಸಾರ್ವಜನಿಕರ ಅಹವಾಲುಗಳಿಗೆ ತ್ವರಿತವಾಗಿ ಸ್ಪಂದಿಸುವಂತೆ ಅಧಿಕಾರಿಗಳಿಗೆ ಸೂಚನೆ

ಜಾಲಹಳ್ಳಿ, ನ.14: ದೇವದುರ್ಗ ತಾಲೂಕು ಆಡಳಿತ ಹಾಗೂ ತಾಲೂಕು ಪಂಚಾಯಿತಿ ಕಾರ್ಯಾಲಯದ ವತಿಯಿಂದ ಜಾಲಹಳ್ಳಿಯ ಅಂಬಿಗರ ಚೌಡಯ್ಯ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಹೋಬಳಿ ಮಟ್ಟದ ಪ್ರಜಾಸೇವಾ ಆಂದೋಲನ–2026ಕ್ಕೆ ಶಾಸಕಿ ಕರೆಮ್ಮ ಜಿ. ನಾಯಕ ಅವರು ಗಿಡಕ್ಕೆ ನೀರುಣಿಸುವ ಮೂಲಕ ಚಾಲನೆ ನೀಡಿದರು.

ಕರ್ನಾಟಕ ಸರ್ಕಾರದ ‘ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ’ ಎಂಬ ಘೋಷವಾಕ್ಯದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು ಪ್ರಾರ್ಥನಾ ಗೀತೆ ಹಾಡಿದರು. ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಡಿ. ರಾಜಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕಿ ಕರೆಮ್ಮ ಜಿ. ನಾಯಕ, ಪ್ರತಿ ಶನಿವಾರ ತಮ್ಮ ನೇತೃತ್ವದಲ್ಲಿ ತಾಲೂಕು ಮಟ್ಟದ ಪ್ರಜಾಸೇವಾ ಆಂದೋಲನ ಹಮ್ಮಿಕೊಳ್ಳಲಾಗುತ್ತಿದೆ. ಸಾರ್ವಜನಿಕರು ತಮ್ಮ ಸಮಸ್ಯೆಗಳನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಸ್ಥಳದಲ್ಲಿಯೇ ಪರಿಹಾರ ಪಡೆದುಕೊಳ್ಳಲು ಈ ಕಾರ್ಯಕ್ರಮ ಅವಕಾಶ ಕಲ್ಪಿಸುತ್ತದೆ. ಆದ್ದರಿಂದ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಪ್ರಜಾಸೇವಾ ಆಂದೋಲನವು ಸನ್ಮಾನ ಮಾಡಿಸಿಕೊಳ್ಳುವ ವೇದಿಕೆಯಲ್ಲ. ಜನರ ಸಮಸ್ಯೆಗಳಿಗೆ ಸ್ಪಂದಿಸಿ ಅವುಗಳನ್ನು ಪರಿಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವ ವೇದಿಕೆಯಾಗಿದೆ. ಜನರ ಸೇವೆ ಮಾಡುವುದೇ ನನ್ನ ಮುಖ್ಯ ಉದ್ದೇಶವಾಗಿದೆ. ಅಧಿಕಾರಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಸಮರ್ಪಕವಾಗಿ ಸ್ಪಂದಿಸಿ, ವಿಳಂಬ ಮಾಡದೆ ಪರಿಹಾರ ಒದಗಿಸಬೇಕು ಎಂದು ಸೂಚಿಸಿದರು.

ಈ ಸಂದರ್ಭದಲ್ಲಿ ತಾಲೂಕು ಆಡಳಿತದ ವತಿಯಿಂದ ಶಾಸಕಿ ಕರೆಮ್ಮ ಜಿ. ನಾಯಕ ಅವರನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿದ್ದ ಜನಪ್ರತಿನಿಧಿಗಳು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಸಹ ಸನ್ಮಾನಿಸಿ ಗೌರವಿಸಲಾಯಿತು.

ಬಾಕ್ಸ್ ಸುದ್ದಿ

ಪ್ರಜಾಸೇವಾ ಆಂದೋಲನದಲ್ಲಿ 63 ಅರ್ಜಿ ಸ್ವೀಕಾರ; ರೈಲ್ವೆ ಮಾರ್ಗಕ್ಕೆ ಪತ್ರಕರ್ತರಿಂದ ಮನವಿ

ಜಾಲಹಳ್ಳಿಯಲ್ಲಿ ನಡೆದ ಪ್ರಜಾಸೇವಾ ಆಂದೋಲನದಲ್ಲಿ ಒಟ್ಟು 63 ಅರ್ಜಿಗಳು ಸಲ್ಲಿಕೆಯಾಗಿವೆ. ಈ ಸಂದರ್ಭದಲ್ಲಿ ಪತ್ರಕರ್ತ ಖಾಜಾ ಹುಸೇನ್ ಬಾಬಾ ಅವರು ರಾಯಚೂರು–ದೇವದುರ್ಗ–ಬಿಜಾಪುರ ರೈಲ್ವೆ ಮಾರ್ಗ ನಿರ್ಮಾಣದ ಕುರಿತು ಶಾಸಕಿ ಕರೆಮ್ಮ ಜಿ. ನಾಯಕ ಅವರ ಗಮನಕ್ಕೆ ತಂದು ಜಿಲ್ಲಾಧಿಕಾರಿಗಳ ಮೂಲಕ ರೇಲ್ವೆ ಸಚಿವರಿಗೆ ಮನವಿ ಸಲ್ಲಿಸಲಾಗಿದೆ ಎಂದು ಗಮನಕ್ಕೆ ತರಲಾಯಿತು .

ಮನವಿಗೆ ಸ್ಪಂದಿಸಿದ ಶಾಸಕಿ, ಈ ವಿಷಯವಾಗಿ ರೈಲ್ವೆ ಸಚಿವರಿಗೆ ಶೀಘ್ರದಲ್ಲೇ ಮನವಿ ಸಲ್ಲಿಸಲಾಗುವುದು ಎಂದು ಭರವಸೆ ನೀಡಿದರು. ವಿವಿಧ ಸಂಘ-ಸಂಸ್ಥೆಗಳ ಪ್ರತಿನಿಧಿಗಳು ತಮ್ಮ ಬೇಡಿಕೆಗಳಿಗೆ ಸಂಬಂಧಿಸಿದಂತೆ ಮನವಿ ಪತ್ರಗಳನ್ನು ಸಲ್ಲಿಸಿದರು.

ಪಂಚಾಯಿತಿ ಅಧ್ಯಕ್ಷೆ ಹನುಮಂತಿ ಶಿವಬಸಪ್ಪ ರಾಮ್ ಪಾಳಿ, ಉಪಾಧ್ಯಕ್ಷ ವೀರೇಶ್ ಅರಕೇರಾ, ತಹಸೀಲ್ದಾರ್ ನಾಗಮ್ಮ ಕಟ್ಟಿಮನಿ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಡಿ. ರಾಜಕುಮಾರ್, ಸಿಡಿಪಿಒ ಮಹೇಶ್ ನಾಯಕ, ಕ್ಷೇತ್ರ ಶಿಕ್ಷಣಾಧಿಕಾರಿ ರಾಧಾದೇವಿ, ತಾಲೂಕು ಯೋಜನಾಧಿಕಾರಿ ಅಮರೇಶ್ ಕುಂಬಾರ, ತಾಲೂಕು ಆರೋಗ್ಯಾಧಿಕಾರಿ ಡಾ. ಬನದೇಶ್ವರ, ಅಬಕಾರಿ ಅಧಿಕಾರಿ ವಿಠ್ಠಲ್, ಜಾಲಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ವೈಶಾಲಿ ಜಳಕಿ, ಜಾಲಹಳ್ಳಿ ಕಂದಾಯ ನಿರೀಕ್ಷಕಿ ದೇವಿ ರೆಡ್ಡಿ, ಉಪತಹಸೀಲ್ದಾರ್ ಗೋವಿಂದಪ್ಪ ಸೇರಿದಂತೆ ತಾಲೂಕು ಆಡಳಿತದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

— Khaja Hussain

ಜಾಲಹಳ್ಳಿಯ ಪ್ರಜಾಸೇವಾ ಆಂದೋಲನದಲ್ಲಿ ಗಮನ ಸೆಳೆದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಳಿಗೆಅಂಗನವಾಡಿ ಮಕ್ಕಳ ವಿಶೇಷ ವೇಷಭೂಷಣ, ಇಲಾಖೆಯ ಸೌಲಭ್ಯಗಳ ಮಾಹಿತಿ ಪ್ರದರ್ಶನಕ್ಕೆ ಶಾಸಕಿ ಕರೆಮ್ಮ ಜಿ. ನಾಯಕ ಮೆಚ್ಚುಗೆ



ಜಾಲಹಳ್ಳಿ ಬ್ರೇಕಿಂಗ್ ನ್ಯೂಸ್

ಜಾಲಹಳ್ಳಿಯ ಪ್ರಜಾಸೇವಾ ಆಂದೋಲನದಲ್ಲಿ ಗಮನ ಸೆಳೆದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಳಿಗೆ

ಅಂಗನವಾಡಿ ಮಕ್ಕಳ ವಿಶೇಷ ವೇಷಭೂಷಣ, ಇಲಾಖೆಯ ಸೌಲಭ್ಯಗಳ ಮಾಹಿತಿ ಪ್ರದರ್ಶನಕ್ಕೆ ಶಾಸಕಿ ಕರೆಮ್ಮ ಜಿ. ನಾಯಕ ಮೆಚ್ಚುಗೆ

ಜಾಲಹಳ್ಳಿ, ನ.14: ದೇವದುರ್ಗ ತಾಲೂಕು ಆಡಳಿತ ಹಾಗೂ ತಾಲೂಕು ಪಂಚಾಯಿತಿ ಕಾರ್ಯಾಲಯದ ವತಿಯಿಂದ ಜಾಲಹಳ್ಳಿಯ ಅಂಬಿಗರ ಚೌಡಯ್ಯ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಹೋಬಳಿ ಮಟ್ಟದ ಪ್ರಜಾಸೇವಾ ಆಂದೋಲನದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಶಿಶು ಅಭಿವೃದ್ಧಿ ಯೋಜನೆ, ದೇವದುರ್ಗ ವತಿಯಿಂದ ಎರಪಾಡು ಮಾಡಲಾಗಿದ್ದ ಮಾಹಿತಿ ಮತ್ತು ಪ್ರಚಾರ ಮಳಿಗೆ ವಿಶೇಷವಾಗಿ ಗಮನ ಸೆಳೆಯಿತು.

ಶಾಸಕಿ ಕರೆಮ್ಮ ಜಿ. ನಾಯಕ ಅವರು ಮಳಿಗೆಯನ್ನು ಉದ್ಘಾಟಿಸಿ, ಅಂಗನವಾಡಿ ಕೇಂದ್ರಗಳ ಮೂಲಕ ಮಕ್ಕಳಿಗೆ ಹಾಗೂ ಸಾರ್ವಜನಿಕರಿಗೆ ದೊರೆಯುವ ವಿವಿಧ ಸೌಲಭ್ಯಗಳು ಮತ್ತು ಇಲಾಖೆಯ ಯೋಜನೆಗಳ ಕುರಿತು ಮಾಹಿತಿ ಪಡೆದರು. ಮಳಿಗೆಯಲ್ಲಿ ಅಂಗನವಾಡಿ ಮಕ್ಕಳಿಗೆ ವಿಶೇಷ ವೇಷಭೂಷಣಗಳನ್ನು ತೊಡಿಸಿ ಪರಿಚಯಿಸಿದ್ದು, ಸಾರ್ವಜನಿಕರ ಗಮನ ಸೆಳೆಯಿತು.

ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ದೊರೆಯುವ ಪೌಷ್ಟಿಕ ಆಹಾರ, ಶಿಕ್ಷಣ, ಆರೋಗ್ಯ ಹಾಗೂ ಇತರ ಸೌಲಭ್ಯಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಲಾಯಿತು. ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗಾಗಿ ಇಲಾಖೆಯಿಂದ ಜಾರಿಗೊಳಿಸಲಾಗಿರುವ ವಿವಿಧ ಯೋಜನೆಗಳ ಬಗ್ಗೆಯೂ ಅರಿವು ಮೂಡಿಸಲಾಯಿತು.

ಮಳಿಗೆಯಲ್ಲಿನ ಮಾಹಿತಿ ಪ್ರದರ್ಶನ ಹಾಗೂ ಅಂಗನವಾಡಿ ಮಕ್ಕಳ ವಿಶೇಷ ವೇಷಭೂಷಣವನ್ನು ಕಂಡು ಶಾಸಕಿ ಕರೆಮ್ಮ ಜಿ. ನಾಯಕ ಅವರು ಸಂತಸ ವ್ಯಕ್ತಪಡಿಸಿ, ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕಾರ್ಯವನ್ನು ಮೆಚ್ಚಿಕೊಂಡರು.

ಯೋಜನಾಧಿಕಾರಿ ಮಹೇಶ್ ನಾಯಕ, ಜಾಲಹಳ್ಳಿ ವಲಯ ಮೇಲ್ವಿಚಾರಕಿ ಶಾಂತಾಬಾಯಿ ರಾಥೋಡ್, ದೇವದುರ್ಗ ಹಿರಿಯ ಮೇಲ್ವಿಚಾರಕಿ ಗಂಗಮ್ಮ, ಜಾಲಹಳ್ಳಿ ಬಿ ವಲಯದ ಮೇಲ್ವಿಚಾರಕಿ ನಿರ್ಮಲಾದೇವಿ, ಮಸರಕಲ್ ಮೇಲ್ವಿಚಾರಕಿ ಶರಣಮ್ಮ, ದೇವದುರ್ಗ ಸ್ತ್ರೀಶಕ್ತಿ ಒಕ್ಕೂಟದ ಅಧ್ಯಕ್ಷೆ ಶರಣಮ್ಮ, ತಾಲೂಕು ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಹೈದರಾಬಿ ಸೇರಿದಂತೆ ಜಾಲಹಳ್ಳಿ ಗ್ರಾಮದ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

— Khaja Hussain

ಜಾಲಹಳ್ಳಿಯಲ್ಲಿ ಹೋಬಳಿ ಮಟ್ಟದ ಪ್ರಜಾಸೇವಾ ಆಂದೋಲನಕ್ಕೆ ಶಾಸಕಿ ಕರೆಮ್ಮ ಜಿ. ನಾಯಕ ಚಾಲನೆ - 63 ಅರ್ಜಿ ಸ್ವೀಕಾರ



ಜಾಲಹಳ್ಳಿ: ಹೋಬಳಿ ಮಟ್ಟದ ಪ್ರಜಾಸೇವಾ ಆಂದೋಲನಕ್ಕೆ ಶಾಸಕಿ ಕರೆಮ್ಮ ಜಿ. ನಾಯಕ ಚಾಲನೆ

ದೇವದುರ್ಗ: ತಾಲೂಕು ಆಡಳಿತ ಹಾಗೂ ತಾಲೂಕು ಪಂಚಾಯಿತಿ ವತಿಯಿಂದ ಜಾಲಹಳ್ಳಿಯ ಅಂಬಿಗರ ಚೌಡಯ್ಯ ಭವನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಹೋಬಳಿ ಮಟ್ಟದ ಪ್ರಜಾಸೇವಾ ಆಂದೋಲನ-2026ಕ್ಕೆ ಶಾಸಕಿ ಕರೆಮ್ಮ ಜಿ. ನಾಯಕ ಅವರು ಗಿಡಕ್ಕೆ ನೀರುಣಿಸುವ ಮೂಲಕ ಚಾಲನೆ ನೀಡಿದರು.

ಕರ್ನಾಟಕ ಸರ್ಕಾರದ ‘ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ’ ಎಂಬ ಘೋಷವಾಕ್ಯದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಲಾ ಮಕ್ಕಳು ಪ್ರಾರ್ಥನಾ ಗೀತೆ ಹಾಡಿದರು. ಸಮಾಜ ಕಲ್ಯಾಣ ಇಲಾಖ

ಹನುಮಂತಿ ಶಿವಬಸಪ್ಪ ರಾಂಪಳ್ಳಿ, ಉಪಾಧ್ಯಕ್ಷ ಈರಪ್ಪ ಅರಕೇರಾ, ತಹಸೀಲ್ದಾರ್ ನಾಗಮ್ಮ ಕಟ್ಟಿಮನಿ, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಡಿ. ರಾಜಕುಮಾರ್, ಸಿಡಿಪಿಒ ಮಹೇಶ್ ನಾಯಕ, ಕ್ಷೇತ್ರ ಶಿಕ್ಷಣಾಧಿಕಾರಿ ರಾಧಾದೇವಿ, ತಾಲೂಕು ಯೋಜನಾಧಿಕಾರಿ ಅಮರೇಶ್ ಕುಂಬಾರ, ತಾಲೂಕು ಆರೋಗ್ಯಾಧಿಕಾರಿ ಡಾ. ಬನದೇಶ್ವರ, ಅಬಕಾರಿ ಅಧಿಕಾರಿ ವಿಠ್ಠಲ್, ಜಾಲಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ವೈಶಾಲಿ ಜಳಕಿ, ಜಾಲಹಳ್ಳಿ ಕಂದಾಯ ನಿರೀಕ್ಷಕಿ ದೇವಿ ರೆಡ್ಡಿ, ಉಪತಹಸೀಲ್ದಾರ್ ಗೋವಿಂದಪ್ಪ ಸೇರಿದಂತೆ ತಾಲೂಕು ಆಡಳಿತದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

— Ningappa

ನವೆಂಬರ್16ರಂದು ರೈತರ ಬೃಹತ್ ಹೋರಾಟ ಪಕ್ಷಾತೀತವಾಗಿ ಭಾಗವಹಿಸುವಂತೆ ಗೌರಿ ಮನವಿ



ರಾಯಚೂರು: ಇದೇ ನವೆಂಬರ್ 16ರಂದು ಸಿರವಾರ ಕ್ರಾಸ್ ಬಳಿ ದೇವದುರ್ಗ ಕ್ಷೇತ್ರದ ಶಾಸಕಿ ಕರಿಯಮ್ಮ ಜಿ ನಾಯಕ ಅವರ ನೇತೃತ್ವದಲ್ಲಿ ನಡೆಯಲಿರುವ ಬೃಹತ್ ರೈತ ಹೋರಾಟದ ರೂಪುರೇಷದ ತಯಾರಿ ಭಾಗವಾಗಿ ಹಳ್ಳಿ ಹಳ್ಳಿಗೆ ಪಕ್ಷದ ಕಾರ್ಯಕರ್ತರು,ಮುಖಂಡರು ಅಭೂತಪೂರ್ವ ಪ್ರಚಾರಾಂದೋಲನ ನಡೆಸಿದರು.

ಹೋರಾಟದ ಪ್ರಚಾರಾಂದೋಲನ ಕುರಿತು ಕುಮಾರಿ ಗೌರಿ ರೈತರನ್ನು ಉದ್ದೇಶಿ ಮಾತನಾಡಿದ ಅವರು,ಇದು ಪಕ್ಷಾತೀತ ಹೋರಾಟ ರೈತರಿಗೆ ಜನವರಿ ವರಗೆ ನೀರು ಹರಿಸಬೇಕು ಅಂದಾಗ ಮಾತ್ರ ಪೂರ್ಣಪ್ರಮಾಣದ ಬೆಳೆ ಬರಲು ಸಾಧ್ಯ ಹಾಗಾಗಿ ರೈತರು ದೊಡ್ಡ ಸಂಖ್ಯೆಯಲ್ಲಿ ಇದೇ ನ.16 ನಡೆಯಲಿರುವ ಬೃಹತ್ ಹೋರಾಟದಲ್ಲಿ ಜಾತಿ,ಧರ್ಮ ಪಕ್ಷ ಎನ್ನದೇ ಎಲ್ಲರೂ ಭಾಗವಹಿಸಬೇಕೆಂದು ಮನವಿ ಮಾಡಿದರು.

ಜೆಡಿಎಸ್ ಪಕ್ಷದ ವಕ್ತಾರರಾದ ಗೋವಿಂದರಾಜ ನಾಯಕ ಕೊತ್ತದೊಡ್ಡಿ,ಸಿದ್ದಣ್ಣ ಗಣೇಕಲ್, ಚನ್ನಪ್ಪ ಮಸೀದಾಪುರ ,ಕೆ ವೆಂಕಟೇಶ ಗೌಡ,ತಿಮ್ಮಾರೆಡ್ಡಿ ,ಮರಣ್ಣಮಲದಕಲ್ ಗುರುನಾಥರೆಡ್ಡಿ ,ಇಸಾಕ್ ಮೇಸ್ತ್ರಿ ಸೇರಿದಂತೆ ಇತರರು ಇದ್ದರು.

— Ningappa

ವಾಲಿ ಲಂಡನ್‌ನಲ್ಲಿ ಧಾರ್ಮಿಕ ಸಮರಸತೆಯನ್ನು ಉತ್ತೇಜಿಸುತ್ತಾರೆ



ಬೀದರ್: ಬೀದರ್‌ನ ಯುವ ನಾಯಕ ಆದಿಶ್ ಆರ್. ವಾಲಿ, ಲಂಡನ್‌ನ ಪ್ರಸಿದ್ಧ ವೆಂಬ್ಲಿ ಸ್ಟೇಡಿಯಂನಲ್ಲಿ ನಡೆಸಲ್ಪಟ್ಟ ಇಂಟರ್ಫೇತ್ ಸಮ್ಮೇಳನದಲ್ಲಿ ಭಾಗವಹಿಸಿದರು. ಧಾರ್ಮಿಕ ಸಮರಸತೆ, ಯುವ ನಾಯಕತ್ವ ಮತ್ತು ಸಾಮಾಜಿಕ ಏಕತೆ ಕುರಿತಾಗಿ ಅವರು ಭಾಷಣ ನೀಡಿದರು, ಇದರಿಂದ ಅಂತರರಾಷ್ಟ್ರೀಯ ಗಮನ ಸೆಳೆದಿದೆ. "Young Leaders Light the Wembley Way" ಎಂಬ ಶೀರ್ಷಿಕೆಯ ಈ ಕಾರ್ಯಕ್ರಮದಲ್ಲಿ ಇಂಗ್ಲೆಂಡ್‌ನ ವಿವಿಧ ಭಾಗಗಳ ಧಾರ್ಮಿಕ ನಾಯಕರನ್ನು, ಸಮುದಾಯ ಪ್ರತಿನಿಧಿಗಳನ್ನು ಮತ್ತು ಯುವಕರನ್ನು ಒಟ್ಟುಗೂಡಿಸಲಾಯಿತು. ವಿವಿಧ ಧರ್ಮಗಳ ನಡುವೆ ಪರಸ್ಪರ ನಂಬಿಕೆ, ಸ್ನೇಹ ಮತ್ತು ಸಹಕಾರವನ್ನು ಬೆಳೆಸುವುದು ಮುಖ್ಯ ಉದ್ದೇಶವಾಗಿತ್ತು. ಆದಿಶ್ ವಾಲಿ ಯುವಕರಿಗೆ ಧಾರ್ಮಿಕ ಹಾಗೂ ಸಾಂಸ್ಕೃತಿಕ ವ್ಯತ್ಯಾಸಗಳಿಗಿಂತ ಮೇಲುಗೈ ಸಾಧಿಸಿ, ಸಮಾಜದಲ್ಲಿ ಏಕತೆ ಮತ್ತು ಪರಸ್ಪರ ಗೌರವವನ್ನು ನಿರ್ಮಿಸಲು ಪ್ರೇರೇಪಿಸಿದರು. ಸಂವಾದ, ಸಹಕಾರ ಮತ್ತು ಸಮೂಹ ಪ್ರಯತ್ನಗಳ ಮೂಲಕ ವೈವಿಧ್ಯತೆಯನ್ನು ಶಕ್ತಿಯಾಗಿ ಪರಿವರ್ತಿಸುವ ಮಹತ್ವವನ್ನು ಅವರು ಒತ್ತಿ ಹೇಳಿದರು, ಶಾಂತ ಮತ್ತು ಸಮರಸ ಸಮಾಜಕ್ಕಾಗಿ. ಲಂಡನ್ ಯುವ ಕೌನ್ಸಿಲ್‌ನ ಮೊದಲ ಭಾರತೀಯ ಸದಸ್ಯರಾಗಿರುವ ಆದಿಶ್ ವಾಲಿ, ಹಿಂದಿನದಾಗಿ ಲಂಡನ್ ಶಾಲಾ ಆರ್ಥಿಕಶಾಸ್ತ್ರ (LSE) ನಲ್ಲಿ ಇಂಟರ್ಫೇತ್ ಯುವ ಶೃಂಗವನ್ನು ಆಯೋಜಿಸಿ, ಬ್ರಿಟಿಷ್ ಸಂಸತ್ತಿನಲ್ಲಿ ಯುವ ಸಂಬಂಧಿತ ನೀತಿ ಶಿಫಾರಸುಗಳನ್ನು ಪ್ರಸ್ತುತಪಡಿಸಿದ್ದಾರೆ. ಅವರ ಸಾಧನೆಗಳು ಬೀದರ್‌ನ್ನು ಹೆಮ್ಮೆಪಡಿಸಿದೆ, ಏಕೆಂದರೆ ಅವರು ಜಾಗತಿಕ ವೇದಿಕೆಯಲ್ಲಿ ಜನತಾಂತ್ರಿಕತೆ ಮತ್ತು ಸಮಾನತೆಯ ಆದರ್ಶಗಳನ್ನು ಪ್ರಸಾರ ಮಾಡಿದ್ದು, ತಮ್ಮ ಜನ್ಮಭೂಮಿಯ ಬಸವಣ್ಣನ ಪರಂಪರೆಯನ್ನು ಪ್ರತಿಬಿಂಬಿಸುತ್ತದೆ.

— Basavaraj pujari

ಪ್ರಜಾಸೇವೆ ಆಂದೋಲನ ಕಾರ್ಯಕ್ರಮ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಸರ್ಕಾರಿ ಸೌಲಭ್ಯಗಳ ಬಗ್ಗೆ ಜಾಗೃತಿ



ದೇವದುರ್ಗ: ತಾಲ್ಲೂಕಿನ ಜಾಲಹಳ್ಳಿ ಗ್ರಾಮದಲ್ಲಿ ನಡೆದ ಪ್ರಜಾಸೇವೆ ಆಂದೋಲನ ಕಾರ್ಯಕ್ರಮದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಸ್ಟಾಲ್ ಹಾಕಿ ಇಲಾಖೆಯಿಂದ ದೊರೆಯುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು.

ತಾಲ್ಲೂಕು ಮಟ್ಟದ ಅಧಿಕಾರಿಗಳು,ಅಂಗನವಾಡಿ ಮೇಲ್ವಿಚಾರಕರು ಸೇರಿದಂತೆ ಜಾಲಹಳ್ಳಿ ಹೋಬಳಿಯ ಕೇಂದ್ರಗಳ ಅಂಗನವಾಡಿ ಕಾರ್ಯಕರ್ತರು, ಸಹಾಯಕಿಯರು ಇದ್ದರು.

— Ningappa

ಒತ್ತಾಯಿಸಿ ಕೃಷಿ ಕೂಲಿಕಾರರ ಸಂಘಟನೆಯಿಂದ ಶಾಸಕರಿಗೆ ಮನವಿ



ರಾಯಚೂರು: ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಜಾಲಹಳ್ಳಿಯಲ್ಲಿ ನಡೆದ ಪ್ರಜಾ ಸೇವೆ ಆಂದೋಲನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕ್ಷೇತ್ರದ ಶಾಸಕಿ ಕರಿಯಮ್ಮ ಜೀ ನಾಯಕ ಅವರಿಗೆ ಕೃಷಿ ಕೂಲಿಕಾರ ಸಂಘಟನೆ ಮುಖಂಡರು ಮನವಿ ಸಲ್ಲಿಸಿದರು.

ಗ್ರಾಮದಲ್ಲಿ ಮಹಿಳಾ ವಸತಿ ನಿಲಯ, ಅಕ್ರಮ ಮದ್ಯಪಾನ, ಮಟ್ಕಾ,ಜೂಜಾಟ, ಅಕ್ರಮ ಮರಳು ಸಾಗಾಣಿಕೆ ನಿಯಂತ್ರಿಸುವಂತೆ ಒತ್ತಾಯಿಸಿದರು.

ಅಲ್ಲದೇ ಬಸವೇಶ್ವರ ವೃತ್ತದಿಂದ ಬಾಲಕರ ಪ್ರೌಡ ಶಾಲೆ ವರೆಗೆ ರಸ್ತೆ ಡಿವೈಡರ್ ನಿರ್ಮಿಸುವುದು, ವಾಲ್ಮೀಕಿ ವೃತ್ತದಿಂದ ಶ್ರೀಲಕ್ಷ್ಮಿ ರಂಗನಾಥ ದೇವಸ್ಥಾನದ ವರೆಗೆ ರಸ್ತೆ ಒತ್ತುವರಿಯಾಗಿದ್ದು ಅದನ್ನು ತೆರವುಗಳಿಸುವು ಮತ್ತು ಶ್ರೀ ಲಕ್ಷ್ಮಿ ರಂಗನಾಥ ದೇವಸ್ಥಾನದ ಜಾತ್ರಾ ಮಹೋತ್ಸಕ್ಕೆ ಮೀಸಲಿಟ್ಟ ಜಾಗ ಹದ್ದುಬಸ್ತು ಮಾಡುವಂತೆ ಒತ್ತಾಯಿಸಿದ ಮನವಿ ಪತ್ರ ನೀಡಿದರು.

ಇದೇ ಸಂದರ್ಭದಲ್ಲಿ ಕೃಷಿ ಕೂಲಿಕಾರರ ಸಂಘಟನೆ ತಾಲ್ಲೂಕು ಅಧ್ಯಕ್ಷ ಲಿಂಗಣ್ಣ ಮಕಾಶಿ, ಜಾಲಹಳ್ಳಿ ಗ್ರಾಮ ಘಟಕ ಅಧ್ಯಕ್ಷ ಶರಣಪ್ಪ ಕಾರಲಕುಂಟಿ, ಸುರೇಶ್ ಗೌಡ,ನರೇಶ್, ಶಾಂತಕುಮಾರ್, ಆನಂದ ಇದ್ದರು.

— Ningappa

12ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜಾನಪದ ಕಲಾವಿದ ಈರಣ್ಣ ರುದ್ರಾಕ್ಷಿಗೆ ಸನ್ಮಾನ - ರಾಯಚೂರು ರಂಗಮಂದಿರದಲ್ಲಿ ಗೌರವ - ಜಾನಪದ ಕಲೆಯ ಸೇವೆಗೆ ಸಂದ ಗೌರವಕ್ಕೆ ಅಭಿನಂದನೆ



12ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜಾನಪದ ಕಲಾವಿದ ಈರಣ್ಣ ರುದ್ರಾಕ್ಷಿಗೆ ಸನ್ಮಾನ

ರಾಯಚೂರು: ರಾಯಚೂರಿನ ರಂಗಮಂದಿರದಲ್ಲಿ ಇಂದು ನಡೆದ 12ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಕಾರ್ಯಕ್ರಮದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಸನ್ಮಾನ್ಯ ಶ್ರೀ ಈರಣ್ಣ ರುದ್ರಾಕ್ಷಿ, ಹಿರಿಯ ಹಗಲು ವೇಷ ಜಾನಪದ ಕಲಾವಿದರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಸನ್ಮಾನ್ಯ ಶ್ರೀ ಮಾಜಿ ಸಚಿವರಾದ ಎನ್. ಎಸ್. ಬೋಸ್ ರಾಜ್, ಲೋಕಸಭಾ ಸದಸ್ಯರಾದ ಜಿ. ಕುಮಾರ್ ನಾಯಕ್, ಸಮ್ಮೇಳನದ ಅಧ್ಯಕ್ಷರಾದ ರಾಮಣ್ಣ ಹವಳಿ ಮತ್ತು ಕನ್ನಡ ಸಾಹಿತ್ಯ ಜಿಲ್ಲಾ ಪರಿಷತ್ ಜಿಲ್ಲಾ ಅಧ್ಯಕ್ಷರಾದ ರಂಗಣ್ಣ ಪಟೇಲ್ ಹಳ್ಳುಂಡಿ ರವರು ಸನ್ಮಾನಿಸಿ ಗೌರವಿಸಿದರು.

ಜಾನಪದ ಕಲೆಯ ಸೇವೆಗೆ ಸಂದ ಗೌರವಕ್ಕೆ ಹೃದಯಪೂರ್ವಕ ಅಭಿನಂದನೆಗಳು

— Ningappa

ಬಾಗಲಕೋಟಯಲ್ಲಿ ವಿಶಾಕಾರಿ ನೀರು

ಬಾಗಲಕೋಟೆ: ನಲ್ಲಿಯಲ್ಲಿ ಕುಡಿಯುವ ನೀರಿಲ್ಲ, ಹರಿಯುತ್ತಿರುವುದು ಚರಂಡಿ ನೀರು!

ಪರದಾಟ

— Banneppa Kuntoji

SPORTS

ವೈಭವ್ ಸೂರ್ಯವಂಶಿ 18 ರನ್‌ಗೆ ಔಟ್, ಬಿಹಾರ ತಂಡದ ನಾಯಕನಾಗಿ ಪದಾರ್ಪಣೆ



ಇಂದು ಆರಂಭವಾದ ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿಯಲ್ಲಿ, ಬಿಹಾರ ತಂಡದ ನಾಯಕನಾಗಿ ಪದಾರ್ಪಣೆ ಮಾಡಿದ ಯುವ ಆಟಗಾರ ವೈಭವ್ ಸೂರ್ಯವಂಶಿ, ನಾಯಕತ್ವದ ಪದಾರ್ಪಣೆಯಲ್ಲೇ 18 ರನ್‌ಗೆ ಔಟ್ ಆಗಿದ್ದಾರೆ.

ಸೌರಾಷ್ಟ್ರ ವೇಗಿ ಜಯದೇವ್ ಉನಾದ್ಕಟ್ ಅವರ ಬೌಲಿಂಗ್‌ನಲ್ಲಿ ವೈಭವ್ 18 ರನ್ ಗಳಿಸಿ ಔಟಾಗಿದ್ದಾರೆ. ಈ ಪಂದ್ಯವು ಬಿಹಾರ ತಂಡದ ಮೊದಲ ಪಂದ್ಯವಾಗಿದ್ದು, ನಾಯಕನಾಗಿ ಪದಾರ್ಪಣೆ ಮಾಡಿದರೂ, ಆಟಗಾರರು ಎದುರಿಸಿದ ಕಠಿಣ ಬೌಲಿಂಗ್‌ರಿಂದ ಅಂಕಗಳನ್ನು ಗಳಿಸುವಲ್ಲಿ ವಿಫಲರಾದರು.

ಈ ಘಟನೆಯಿಂದ ಬಿಹಾರ ತಂಡದ ಮುಂದಿನ ಪಂದ್ಯಗಳಲ್ಲಿ ನಾಯಕತ್ವ ಮತ್ತು ಆಟಗಾರರ ಪ್ರದರ್ಶನವನ್ನು ಸುಧಾರಿಸುವ ಅಗತ್ಯವನ್ನು ಸೂಚಿಸುತ್ತದೆ. ತಂಡದ ನಿರ್ವಹಣಾ ಮಂಡಳಿ ಮುಂದಿನ ಪಂದ್ಯಗಳಿಗಾಗಿ ತಂತ್ರಜ್ಞಾನವನ್ನು ಪರಿಷ್ಕರಿಸುವ ಯೋಜನೆ ಹೊಂದಿದೆ.

— Ganesh S

SPORTS

ಭಾರತ vs ನ್ಯೂಜಿಲೆಂಡ್ 4ನೇ ಏಕದಿನ: 244 ರನ್‌ಗಳ ಹೀನಾಯ ಸೋಲು



ಮೌಂಟ್ ಮೌಂಗನುಯಿಯಲ್ಲಿ ನಡೆದ 4ನೇ ಏಕದಿನ ಪಂದ್ಯದಲ್ಲಿ ನ್ಯೂಜಿಲೆಂಡ್ 334 ರನ್‌ಗಳ ಗುರಿ ಸ್ಥಾಪಿಸಿ, ಭಾರತ ಕೇವಲ 89 ರನ್‌ಗಳಿಗೆ ಆಲೌಟ್ ಆಗಿ 244 ರನ್‌ಗಳ ಹೀನಾಯ ಸೋಲನ್ನು ಅನುಭವಿಸಿತು.

ಭಾರತದ ಬ್ಯಾಟ್‌ಮನ್‌ಗಳು ಆರಂಭದಲ್ಲಿ ಉತ್ತಮ ಪ್ರಾರಂಭ ಮಾಡಲಿಲ್ಲ; ಮೊದಲ ಓವರ್‌ಗಳಲ್ಲಿ ಕಡಿಮೆ ರನ್‌ಗಳು ಮತ್ತು ನಿರಂತರ ವಿಕೆಟ್‌ಗಳು ಕಂಡುಬಂದವು, ಇದರಿಂದ ನ್ಯೂಜಿಲೆಂಡ್ ಬೌಲರ್‌ಗಳು ಶಿಸ್ತುಪಾಲಿತವಾಗಿ ದಾಳಿ ನಡೆಸಿದರು.

ಈ ಸೋಲಿನ ನಂತರ ಭಾರತ 5-ಪಂದ್ಯ ಸರಣಿಯಲ್ಲಿ 2-1 ಮುನ್ನಡೆಯಲ್ಲಿದೆ, ಏಕೆಂದರೆ ಹಿಂದಿನ ಪಂದ್ಯಗಳಲ್ಲಿ ಭಾರತ 2 ಗೆಲ್ಲಿತು ಮತ್ತು 1 ಸೋಲಿತು. ಮುಂದಿನ ಪಂದ್ಯಗಳಿಗೆ ತಂಡದ ತಂತ್ರ ಮತ್ತು ಆಯ್ಕೆ ಮಹತ್ವದವಾಗುತ್ತದೆ.

ಸರಣಿಯ ಉಳಿದ ಪಂದ್ಯಗಳಲ್ಲಿ ಭಾರತ ತನ್ನ ಪ್ರಸ್ತುತ ಮುನ್ನಡೆಯನ್ನು ಉಳಿಸಿಕೊಳ್ಳಲು ಮತ್ತು ನ್ಯೂಜಿಲೆಂಡ್‌ಗೆ ವಿರುದ್ಧವಾಗಿ ಸಮತೋಲನ ಸಾಧಿಸಲು ಪ್ರಯತ್ನಿಸಲಿದೆ.

— Ganesh S

SPORTS

ಮ್ಯಾಟ್ ಹೆನ್ರಿ 6 ವಿಕೆಟ್‌ಗಳೊಂದಿಗೆ ಭಾರತದ ಬ್ಯಾಟಿಂಗ್ ಬೆನ್ನೆಲುಬು ಮುರಿದರು



ಮ್ಯಾಟ್ ಹೆನ್ರಿ, ನ್ಯೂಜಿಲೆಂಡ್‌ನ ವೇಗದ ಬೌಲರ್, ಕೇವಲ 27 ರನ್ ನೀಡಿದರೂ 6 ವಿಕೆಟ್‌ಗಳನ್ನು ತೆಗೆದು ಭಾರತದ ಬ್ಯಾಟಿಂಗ್ ಬೆನ್ನೆಲುಬು ಮುರಿದಿದ್ದಾರೆ. ಈ ಪ್ರದರ್ಶನೆಯಿಂದ ಅವರು 'ಪಂದ್ಯಶ್ರೇಷ್ಠ' ಪ್ರಶಸ್ತಿ ಪಡೆದಿದ್ದಾರೆ.

ಮ್ಯಾಥ್ಯೂ ಫಿಶರ್ ಕೂಡ ಉತ್ತಮ ಸಹಾಯವನ್ನು ನೀಡಿದ್ದು, 3 ವಿಕೆಟ್‌ಗಳನ್ನು

ನ್ಯೂಜಿಲೆಂಡ್ ನಡುವಿನ ಕ್ರಿಕೆಟ್ ಸ್ಪರ್ಧೆಯ ಉತ್ಸಾಹವನ್ನು ಹೆಚ್ಚಿಸಿದೆ.

— Ganesh S

SPORTS

ವಿರಾಟ್ ಕೊಹ್ಲಿ, ರೋಹಿತ್ ಶರ್ಮಾ ಮತ್ತು ಅಯ್ಯರ್ ಶೂನ್ಯಕ್ಕೆ ಔಟ್, ಇಶಾನ್ ಕಿಶನ್ 27 ರೊಂದಿಗೆ ಗರಿಷ್ಠ ಸ್ಕೋರರ್



ಇಂದಿನ ಪಂದ್ಯದಲ್ಲಿ ಭಾರತೀಯ ತಂಡದ ಮೂರು ಪ್ರಮುಖ ಬ್ಯಾಟ್ಸ್‌ಮನ್‌ಗಳು—ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಮತ್ತು ಶ್ರೇಯಸ್ ಅಯ್ಯರ್—ಶೂನ್ಯಕ್ಕೆ (ಡಕ್) ಔಟಾಗಿದ್ದು, ತಂಡದ ಅಗ್ರ ಸ್ಕೋರರ್ ಇಶಾನ್ ಕಿಶನ್ 27 ರನ್‌ಗಳೊಂದಿಗೆ ಹೊರಹೊಮ್ಮಿದರು.

ರೋಹಿತ್ ಶರ್ಮಾ ಮೊದಲ ಬ್ಯಾಟ್‌ಮನ್ ಆಗಿ ಹೊರಬಂದು, ಮೊದಲ ಓವರ್‌ನಲ್ಲಿ ಔಟ್ ಆಗಿ ಶೂನ್ಯಕ್ಕೆ ಮುಟ್ಟಿದರು. ಕೊಹ್ಲಿ, ತನ್ನ ಸಾಮಾನ್ಯ ಸ್ಥಿರತೆಯನ್ನು ತೋರಿಸುವ ಬದಲು, ಮಧ್ಯಮ ಓವರ್‌ನಲ್ಲಿ ಶೂನ್ಯಕ್ಕೆ ಔಟಾಗಿದ್ದು, ಅಭಿಮಾನಿಗಳಲ್ಲಿ ಆಶ್ಚರ್ಯ ಉಂಟುಮಾಡಿತು. ಶ್ರೇಯಸ್ ಅಯ್ಯರ್ ಕೂಡ ತನ್ನ ಮೊದಲ ಬೌಲಿಂಗ್‌ಗಿಂತ ಮುಂಚೆ ಶೂನ್ಯಕ್ಕೆ ಔಟಾಗಿದ್ದು, ತಂಡದ ಒಟ್ಟು ಪ್ರಭಾವವನ್ನು ಕಡಿಮೆ ಮಾಡಿತು.

ಈ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಒಬ್ಬ ದಿನದಲ್ಲಿ ಶೂನ್ಯಕ್ಕೆ ಔಟಾದ ಸಂಖ್ಯೆಯಲ್ಲಿ, ಹಿಂದಿನ ದಾಖಲೆದಾರರಾದ ಸಚ್ಚಿನ್ ತೆಂಡೂಲ್ಕರ್‌ನ್ನು ಮೀರಿಸಿ ಹೊಸ ದಾಖಲೆಯನ್ನು ಸ್ಥಾಪಿಸಿದರು. ಇದರಿಂದ ಕೊಹ್ಲಿ ಏಕದಿನದಲ್ಲಿ ಶೂನ್ಯಕ್ಕೆ ಔಟಾದ ಅತಿ ಹೆಚ್ಚು ಬಾರಿ ಆಟಗಾರರ ಪಟ್ಟಿಯಲ್ಲಿ ಸೇರಿದ್ದಾರೆ.

ತಂಡದ ಒಟ್ಟು ಪ್ರದರ್ಶನದ ಮೇಲೆ ಈ ಔಟಗಳು ಪ್ರಭಾವ ಬೀರಿದರೂ, ಇಶಾನ್ ಕಿಶನ್‌ರ ಸ್ಥಿರ ಪ್ರದರ್ಶನದಿಂದ ಕೆಲವು ರನ್‌ಗಳು ಸೇರಿಸಲಾಯಿತು.

— Ganesh S

SPORTS

ಐಪಿಎಲ್ 2027 ಹರಾಜು ಮುನ್ನ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ ಯುವ ಪ್ರತಿಭೆ ವೈಭವ್ ಸೂರ್ಯವಂಶಿ ಮತ್ತು ಇತರ ಆಟಗಾರರ ಮೇಲೆ ಫ್ರಾಂಚೈಸಿಗಳ ಕಣ್ಣು



ಸೈಯದ್ ಮುಷ್ತಾಕ್ ಅಲಿ ಟ್ರೋಫಿ, ಭಾರತ ಕ್ರಿಕೆಟ್‌ನ ಪ್ರಮುಖ ಯುವ ಟೂರ್ನಮೆಂಟ್, ಈ ವರ್ಷ ಐಪಿಎಲ್ 2027 ಹರಾಜು ಮುನ್ನ ನಡೆಯುತ್ತಿದೆ. ಈ ಟೂರ್ನಮೆಂಟ್‌ನಲ್ಲಿ ಯುವ ಪ್ರತಿಭೆಗಳು ತಮ್ಮ ಕೌಶಲ್ಯವನ್ನು ಪ್ರದರ್ಶಿಸುತ್ತಿದ್ದಾರೆ.

ವೈಭವ್ ಸೂರ್ಯವಂಶಿ ಸೇರಿದಂತೆ ಅನೇಕ ಯುವ ಆಟಗಾರರು ಈ ಟೂರ್ನಮೆಂಟ್‌ನಲ್ಲಿ ಗಮನ ಸೆಳೆಯುತ್ತಿದ್ದಾರೆ. ಫ್ರಾಂಚೈಸಿಗಳು ಈ ಆಟಗಾರರ ಪ್ರದರ್ಶನವನ್ನು ನಿಕಟವಾಗಿ ವಿಶ್ಲೇಷಿಸಿ, ಭವಿಷ್ಯದ ಆಯ್ಕೆಗಳಿಗಾಗಿ ಆಯ್ಕೆ ಪ್ರಕ್ರಿಯೆಯಲ್ಲಿ ಸೇರಿಸುವ ಸಾಧ್ಯತೆಯನ್ನು ಪರಿಗಣಿಸುತ್ತಿದ್ದಾರೆ.

ಟ್ರೋಫಿ ಮುಗಿದ ನಂತರ, ಆಯ್ಕೆ ಪ್ರಕ್ರಿಯೆ ಆರಂಭವಾಗುವ ಮುನ್ನ, ಫ್ರಾಂಚೈಸಿಗಳು ಈ ಯುವ ಪ್ರತಿಭೆಗಳೊಂದಿಗೆ ಸಂಭಾಷಣೆ ನಡೆಸಿ, ಅವರ ಸಾಮರ್ಥ್ಯ ಮತ್ತು ತಂಡದ ಅವಶ್ಯಕತೆಗಳಿಗೆ ಹೊಂದಿಕೊಳ್ಳುವಂತೆ ನಿರ್ಧಾರ ತೆಗೆದುಕೊಳ್ಳುವ ನಿರೀಕ್ಷೆ ಇದೆ.

— Ganesh S

ರಾಮಾಯಣ ಸಿನಿಮಾ 9ನೇ ದಿನದಲ್ಲಿ ಜಾಗತಿಕ 1,110 ಕೋಟಿ ರೂ. ಗಳಿಸಿದೆ



ರಾಮಾಯಣ' ಚಿತ್ರವು 9ನೇ ದಿನವಾದ ನಿನ್ನೆ ಭಾರತದಲ್ಲಿ 47.85 ಕೋಟಿ ರೂ. ನಿವ್ವಳ ಸಂಗ್ರಹವನ್ನು ದಾಖಲಿಸಿದೆ. ಈ ಸಂಗ್ರಹದೊಂದಿಗೆ ದೇಶೀಯ ಒಟ್ಟು 612.45 ಕೋಟಿ ರೂ. ಗಳಿಸಿ, ಚಿತ್ರವು ದೇಶೀಯ ಬಾಕ್ಸ್ ಆಫೀಸ್‌ನಲ್ಲಿ ಮಹತ್ವದ ಮೈಲಿಗಲ್ಲು ಸಾಧಿಸಿದೆ.

ರಾಷ್ಟ್ರೀಯ ಮಟ್ಟದಲ್ಲಿ, ಈ ಚಿತ್ರವು 9 ದಿನಗಳ ಅವಧಿಯಲ್ಲಿ 47.85 ಕೋಟಿ ರೂ. ಸಂಗ್ರಹಿಸಿ, ಪ್ರೇಕ್ಷಕರಿಂದ ಹೆಚ್ಚಿನ ಸ್ವೀಕಾರವನ್ನು ಪಡೆಯುತ್ತಿದೆ. ಇದರಿಂದ ಚಿತ್ರವು ಮೊದಲ ವಾರದಲ್ಲಿ ನಿರೀಕ್ಷಿತ ಆದಾಯವನ್ನು ಮೀರಿಸಿದೆ.

ಕೋಟಿ ರೂ. ಗಳಿಸಿ, ಜಾಗತಿಕ ಮಟ್ಟದಲ್ಲಿ ಯಶಸ್ವಿ ಪ್ರದರ್ಶನ ನೀಡುತ್ತಿದೆ. ಈ ಸಂಖ್ಯೆ, ಭಾರತೀಯ ಚಿತ್ರರಂಗದ ಅಂತರರಾಷ್ಟ್ರೀಯ ಪ್ರಭಾವವನ್ನು ಮತ್ತಷ್ಟು ಬಲಪಡಿಸಿದೆ.

ರಣಬೀರ್ ಕಪೂರ್, ಯಶ್ ಮತ್ತು ಸಾಯಿ ಪಲ್ಲವಿ ಅಭಿನಯದ ಈ ಮಹಾಕಾವ್ಯ ಚಿತ್ರವು, ಪ್ರೇಕ್ಷಕರ ಹೃದಯವನ್ನು ಗೆದ್ದುಕೊಂಡು, ಭಾರತೀಯ ಚಿತ್ರೋದ್ಯಮದ ಹೊಸ ಶಿಖರವನ್ನು ಮುಟ್ಟಿದೆ.

— Ganesh S

ENTERTAINMENT

ಯಶ್ ಅವರ ರಾಮಾಯಣ ಸಿನಿಮಾ 1,000 ಕೋಟಿ ರೂ. ಗಡಿ ದಾಟಿ ಎರಡನೇ 1,000 ಕೋಟಿ ರೂ. ಚಿತ್ರವಾಗಿ ದಾಖಲೆ



ರಾಕಿಂಗ್ ಸ್ಟಾರ್ ಯಶ್ ಅಭಿನಯದ ರಾಮಾಯಣ ಸಿನಿಮಾ, 'ಕೆಜಿಎಫ್ ಚಾಪ್ಟರ್ 2' ನಂತರ, ವಿಶ್ವದಾದ್ಯಂತ 1,000 ಕೋಟಿ ರೂ. ಗಡಿ ದಾಟಿ ಅವರ ಎರಡನೇ 1,000 ಕೋಟಿ ರೂ. ಚಿತ್ರವಾಗಿ ದಾಖಲಾಗಿದೆ.

ಪ್ರಮುಖ ಮೈಲುಗಲ್ಲು ಆಗಿದ್ದು, ಭಾರತೀಯ ಸಿನೆಮಾ ಉದ್ಯಮದಲ್ಲಿ ಅವರ ಸ್ಥಾನವನ್ನು ಮತ್ತಷ್ಟು ದೃಢಪಡಿಸಿದೆ.

ಚಿತ್ರದ ಬಾಕ್ಸ್ ಆಫೀಸ್ ಪ್ರದರ್ಶನವು ಪ್ರೇಕ್ಷಕರಿಂದ ಉತ್ತಮ ಸ್ವೀಕಾರವನ್ನು ಪಡೆದಿದ್ದು, ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಉನ್ನತ ಪ್ರದರ್ಶನವನ್ನು ತೋರಿಸಿದೆ.

— Ganesh S

ENTERTAINMENT

ವಿದೇಶಿ ಮಾರುಕಟ್ಟೆಯಲ್ಲಿ 'ರಾಮಾಯಣ' ಚಿತ್ರ ಧುರಂಧರ್ 2 ದಾಖಲೆಯನ್ನು ಮುರಿದಿದೆ



ವಿದೇಶಿ ಮಾರುಕಟ್ಟೆಯಲ್ಲಿ ಭಾರತೀಯ ಚಿತ್ರ 'ರಾಮಾಯಣ' ತನ್ನ 9ನೇ ದಿನದಲ್ಲಿ 25 ಕೋಟಿ ರೂ. ಗಳಿಸಿ, ಒಟ್ಟು ಸಾಗರೋತ್ತರ ಸಂಗ್ರಹವನ್ನು 378.50 ಕೋಟಿ ರೂ. ತಲುಪಿಸಿದೆ. ಈ ಸಂಗ್ರಹವು ಹಿಂದಿನ ದಾಖಲೆದಾರ ಧುರಂಧರ್ 2 (294 ಕೋಟಿ ರೂ.) ದಾಖಲೆಯನ್ನು ಸ್ಪಷ್ಟವಾಗಿ ಮೀರಿಸಿದೆ.

ಚಿತ್ರದ ವಿದೇಶಿ ಪ್ರೇಕ್ಷಕರಲ್ಲಿ ಹೆಚ್ಚಿದ ಜನಪ್ರಿಯತೆಯನ್ನು ಸೂಚಿಸುತ್ತದೆ. 9ನೇ ದಿನದ ಸಂಗ್ರಹವು ವಿಶೇಷವಾಗಿ ಗಮನಾರ್ಹವಾಗಿದ್ದು, ಚಿತ್ರವು ಪ್ರಾರಂಭದಿಂದಲೇ ಬಲವಾದ ವಿದೇಶಿ ಬಾಕ್ಸ್ ಆಫೀಸ್ ಪ್ರದರ್ಶನವನ್ನು ನಡೆಸುತ್ತಿದೆ.

'ರಾಮಾಯಣ' ಚಿತ್ರದ ಈ ದಾಖಲೆ ಮುರಿದ ಸಾಧನೆ, ಭಾರತೀಯ ಚಿತ್ರ ಉದ್ಯಮದ ವಿದೇಶಿ ಮಾರುಕಟ್ಟೆಯಲ್ಲಿ ಹೆಚ್ಚುತ್ತಿರುವ ಪ್ರಭಾವವನ್ನು ಮತ್ತಷ್ಟು ದೃಢಪಡಿಸಿದೆ.

— Ganesh S

ENTERTAINMENT

10ನೇ ದಿನದಲ್ಲಿ 'ರಾಮಾಯಣ' 91 ಲಕ್ಷ ರೂ. ಗಳಿಸಿ, 10 ದಿನಗಳ ಒಟ್ಟು ಸಂಗ್ರಹ 613.36 ಕೋಟಿ ರೂ. ಮೀರಿತು



10ನೇ ದಿನದ ಬೆಳಗಿನ ಬಾಕ್ಸ್ ಆಫೀಸ್ ವರದಿ ಪ್ರಕಾರ, ಶನಿವಾರ ಬೆಳಗ್ಗೆ 7 ಗಂಟೆಗೆ 'ರಾಮಾಯಣ' ಚಿತ್ರ 91 ಲಕ್ಷ ರೂ. ನಿವ್ವಳ ಗಳಿಸಿದೆ.

ಭಾರತೀಯ ನಿವ್ವಳ ಗಳಿಕೆ 613.36 ಕೋಟಿ ರೂ. (ಒಟ್ಟು ಸಂಗ್ರಹ 733.27 ಕೋಟಿ ರೂ.) ದಾಟಿದೆ.

ಈ ಸಾಧನೆ ಚಿತ್ರದ ಪ್ರಾರಂಭಿಕ ಯಶಸ್ಸನ್ನು ಸೂಚಿಸುತ್ತದೆ ಮತ್ತು ದೇಶದ ವಿವಿಧ ಪ್ರದೇಶಗಳಲ್ಲಿ ಪ್ರೇಕ್ಷಕರಿಂದ ಉತ್ತಮ ಸ್ವೀಕಾರವನ್ನು ಪಡೆದಿದೆ.

'ರಾಮಾಯಣ' ಚಿತ್ರದ ಈ ಬಾಕ್ಸ್ ಆಫೀಸ್ ಪ್ರದರ್ಶನವು ಭಾರತೀಯ ಚಿತ್ರ ಉದ್ಯಮದ ಪ್ರಸ್ತುತ ಪ್ರವೃತ್ತಿಗಳನ್ನು ಮತ್ತು ಪ್ರೇಕ್ಷಕರ ಪ್ರಿಯತೆಯನ್ನು ಹೈಲೈಟ್ ಮಾಡುತ್ತದೆ.

— Ganesh S